ಈ) ಈ ಸಂಘದ ಚೇರ್‌ಮನ್ ಮತ್ತು ನಿರ್ದೇಶಕರುಗಳ ವಿವರ ಈ ಕೆಳಗಿನಂತಿದೆ.

1) ಶ್ರೀ ರವೀಂದ್ರ ಬಿ. ಹಂಚಿ, ಚೇರಮನ್

2) ಶ್ರೀ ಅಮರನಾಥ ಶಿ. ಮಿಶ್ರಿಕೋಟಿ ವೈಸ್ ಚೇರ್‌ಮನ್

3) ಡಾ. ವಾಮನ ರಾಮಚಂದ್ರ ಕುಲಕರ್ಣಿ

4) ಶ್ರೀ ಪಾರೇಶ ಭರಮಪ್ಪ ಮಲಾಜಿ

5) ಶ್ರೀ ಶಮನಸಾಬ ಮಹಮ್ಮದ್ ಹನೀಫ್; ತಟಗಾರ

6) ಶ್ರೀ ಮಲ್ಲಪ್ಪ ಗಿರಿಮಲ್ಲಪ್ಪ ಉಡಗಾರ

7) ಶ್ರೀ ಅಶೋಕ ಶಶಿಧರ ಬಾಗಲಕೋಟಿ

8) ಶ್ರೀ ವೀರಭದ್ರ ಸತ್ಯಪ್ಪ ಬಿನರಾಳಿ

9) ಶ್ರೀ ಭಜರಂಗ ಬಸಪ್ಪ ಹೊನ್ನಂಗಿ

10) ಶ್ರೀ ಈರಣ್ಣ ಬಸಪ್ಪ ಕುದಬಿ

11) ಶ್ರೀಮತಿ ಗೀತಾಂಜಲಿ ಬಾಳಾರಾಮ ರಜಪೂತ

12) ಶ್ರೀ ರಾಜೇಂದ್ರ ಶಿವಶಂಕರಪ್ಪ ಸಂಸುದ್ದಿ

13) ಆನಂತ ದಶರಥ ಬಸ್ತವಾಡ

ಉ) ಈ ಸಂಘದ ಸರ್ಕಾರದ ನಿಯಮಗಳನ್ನು ಮೀರಿ ಸಾಲ ಹಂಚಿರವುದು, ಸರ್ಕಾರದ ಗಮನಕ್ಕೆ ಬಂದಿಲ್ಲ. ಆದರೆ ಸರ್ಕಾರದ ನಿಯಮಗಳನ್ನು ಮೀರಿ ಠೇವಣಿ ಮಾಡಿರುವುದು ಈ ಪ್ರಶ್ನೆ ಮೂಲಕ ಸರ್ಕಾರದ ಗಮನಕ್ಕೆ ಬಂದಿದೆ.

ಊ) ಸದರಿ ಸಂಘದ ವ್ಯವಹಾರಗಳ ಬಗ್ಗೆ ತನಿಖೆ ನಡೆಸಿ, ಕಾನೂನಿನಡಿಯಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಬಾಗಲಕೋಟೆ ತಾಲ್ಲೂಕು ಹೈಕಿ ಬೊಮ್ಮಲಗಿ ಗ್ರಾಮದಲ್ಲಿ ನೀರು ನಿಂತು ಆಗುತ್ತಿರುವ ತೊಂದರೆ

1180 (1392) ಶ್ರೀ ಪೂಜಾರ್ ಪಿ.ಹೆಚ್ (ಬಾಗಲಕೋಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ನಾರಾಯಪುರ ಜಲಾಶಯದ ಹಿನ್ನೀರು ಬಾಗಲಕೋಟೆ ತಾಲ್ಲೂಕಿನ ಬೊಮ್ಮಣಗಿ ಗ್ರಾಮದ ಮನೆಗಳವರೆಗೆ ನಿಂತು ಅಲ್ಲಿಯ ಜನ ಸೊಳ್ಳೆ ಕಡಿತ ಇನ್ನಿತರ ಸಾಂಕ್ರಾಮಿಕ ರೋಗಗಳಿಗೆ ತುತ್ತಾಗಿ ವರ್ಷವಿಡೀ ರೋಗ ಪೀಡಿತರಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಆ ಗ್ರಾಮಗಳನ್ನು ಸ್ಥಳಾಂತರಿಸಬೇಕೆಂದು ಒತ್ತಾಯಿಸುತ್ತಿರುವುದು ನಿಜವಲ್ಲವೆ ?

3) ಹಾಗಿದ್ದಲ್ಲಿ ಸರಕಾರ ಈ ಕುರಿತು ಸಮೀಕ್ಷೆ ಮಾಡಿದೆಯೆ?

4) ಈಗ ಆದು ಯಾವ ಹಂತದಲ್ಲಿದೆ ?

ಶ್ರೀ ಹೆಚ್.ಸಿ.ಶ್ರೀ ಕಂಠಯ್ಯ (ಕಂದಾಯ ಸಚಿವರು) :

1) ಬಾಗಲಕೋಟೆ ತಾಲ್ಲೂಕಿನ ಬೊಮ್ಮಣಗಿ ಹಳ್ಳಿಯು ಕೃಷ್ಣಾ ನದಿಯ ಬಲದಂಡೆಯ ಮೇಲಿರುತ್ತದೆ ಎಂದು ಕೃಷ್ಣಾ ಭಾಗ್ಯ ಜಲ ನಿಗಮವು ವರದಿ ಮಾಡಿರುತ್ತದೆ. ಸದರಿ ನಿಗಮವು ವರದಿ ಮಾಡಿದಂತೆ ಈ ಗ್ರಾಮದ ಅತೀ ಕೆಳ ಮಟ್ಟದ ಕಟ್ಟಡಗಳು ಹಿನ್ನೀರಿನ ಗರಿಷ್ಠ ಮಟ್ಟದಿಂದ 86 ಮೀಟರ್ ಅಂತರದಲ್ಲಿರುತ್ತದೆ. ನಿಸಂಗಮದ ವರದಿಯ ಪ್ರಕಾರ ಧಾನ್ಯ ಸಂಗ್ರಹಿಸುವಹಗೆಗಳಲ್ಲಿ ಬಿಸಿನೀರು ಬರುತ್ತಿದ್ದು ಅಲ್ಲಿ ಸೊಳ್ಳಗಳ ಕಾಟ ಇದೆಯೆಂದು ತಿಳಿದು ಬಂದಿದೆ. ಇತ್ತೀಚೆಗೆ ಹೆಚ್ಚುವರಿ ಜಮೀನು ಹಿನ್ನೀರಿನಲ್ಲಿ ಮುಳುಗಡೆಯಾಗಿತ್ತುರುವುದರಿಂದ ಇಂತಹ ಜಮೀನುಗಳ ಸರ್ವೆ ಕೆಲಸ ಪೂರ್ಣಗೊಂಡಿದ್ದು ಭೂ ಸ್ವಾಧೀನ ಪಡಿಸಿಕೊಳ್ಳುವ ಪ್ರಸ್ತಾವಗಳನ್ನು ತಯಾರಿಸುತ್ತಿದ್ದು, ಈ ಪ್ರಸ್ತಾವನೆಗಳನ್ನು ಕೆ.ಬಿ.ಜೆ.ಎನ್.ಎನ್. ಎಲ್ ರವರು ಪುನರ್ವಸತಿ ಮತ್ತು ಪುನರ್ ನಿರ್ಮಾಣ ಆಯುಕ್ತರುಯು.ಕೆ. ಪಿ.ರವರಿಗೆ ಕಳುಹಿಸಲು ಸಿದ್ಧತೆಗಳು ನಡೆಯುತ್ತಿವೆ.

2) ಇಲ್ಲ

3) ಕೆ.ಬಿ.ಜೆ.ಎನ್.ಎಲ್.ರವರಿಂದ ಪ್ರಸ್ತಾವನೆಗಳು ಸ್ವೀಕೃತವಾದ ಕೂಡಲೇ ಆಯುಕ್ತರು (ಪುನರ್ವಸತಿ, ಪುನರ್‌ನಿರ್ಮಾಣ ಮತ್ತು ಭೂ ಸ್ವಾಧೀನ) ಯುಕೆಪಿರವರು ಈ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳುವರು.

4) ಮೇಲಿನಂತೆ

ಬೆಳ್ತಂಗಡಿ ತಾಲ್ಲೂಕಿನ ಅರಣ್ಯ ಭೂಮಿಯ ಅಂಕಿ ಅಂಶಗಳ ಸಂಗ್ರಹ

1181 (1415) ಶ್ರೀ ಪ್ರಭಾಕರ ಬರಗೇರ ಕೆ (ಬೆಳ್ತಂಗಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬೆಂಗಳೂರಿನ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯ ಸಂಸ್ಥೆ ವತಿಯಿಂದ ದಕ್ಷಿಣ ಕನ್ನಡ ಜಿಲ್ಲೆಯ ವಿಶೇಷವಾಗಿ ಬೆಳ್ತಂಗಡಿ ತಾಲ್ಲೂಕಿನ ಕಂದಾಯ ಮತ್ತು ಅರಣ್ಯ ಭೂಮಿಯಅಂಕಿ ಅಂಶಗಳ ಸಂಗ್ರಹ ಮತ್ತು ತತ್ ಸಂಬಂಧವಾದ ಅಧ್ಯಯನವನ್ನು ಮಾಡಲಾಗಿದೆಯೇ, ಮಾಡಲಾಗಿದ್ದಲ್ಲಿ ವಿವರಗಳೇನು?

ಆ) ಅಧ್ಯಯನದಲ್ಲಿ ಲಭ್ಯವಾದ ಭೂದಾಖಿಗಳ ಕುರಿತಾದ ಭಾಗಿ ವ್ಯತ್ಯಾಸದ ಕುರಿತು ಸರ್ಕಾರವು ಗಮನಹರಿಸಿದೆಯೇ; ಗಮನಿಸಿದ್ದಲ್ಲಿ ಆ ಕುರಿತು ಜರುಗಿಸಲಾದ ಕ್ರಮಗಳೇನು?

ಇ) ಸದರಿ ಅಧ್ಯಯನದ ಶಿಫಾರಸ್ಸುಗಳು ಯಾವುವು? ಅವುಗಳನ್ನು ಜಾರಿಗೊಳಿಸಲಾಗಿದೆಯೇ?